(b) whether the Government will take action to fill up these vacant posts?

SRI G.B. SHANKARA RAO (Minister for Education.)—

(a) There are no vacant posts.

(b) This question does not arise in view of the reply to question (a) above;

Raw gold produced at Hutti Gold Mines

729 SRI A. BASAVARJA PATIL (Lingsugur)—Will the Chief Minister be pleased to state.—

(a) whether it has come to the notice of Government that the raw gold produced at Hutti Gold Mines is being sumuggled out of the State in a very large scale since 1976;

(b) the no-of employees working in Hutti Gold Mines in the year 1976 and the no of workers working at present?

SRI R. GUNDU RAO (Chief Minister)

(a) No.

(b) As on 31-3-1976 ... 3,574 persons
As on 15-2-1981 ... 3,999 persons

Representation by Members.

(1) re: Fire accident at Devaraj Market, Mysore

SRI AZEEZ SAIT.—Sir In Devaraja Market in Mysore according to Press report 102 shops have been gutted and goods work lakhs of rupees have been destroyed. Fire engines have failed to come there in time. It has come after one hour while one more fire engine was coming, it was stopped in the way and fire engines were brought from Mandya and Bangalore. It is a very unfortunate fire accident that has taken place. So, I request you to kindly take up that matter. It is a city market and the jaggery merchants and the flower merchants have suffered a lot.

ಶ್ರೀ ಎಚ್. ಗಂಗಾಧರನ್,—ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ಸೂಚನೆ ಕಳಿಸಿದ್ದೇನೆ ನನಗೆ ವಿಷಯ ಗೊತ್ತಾದ ಕೂಡಲೆ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ತಿಳಿಸಿದ್ದೇನೆ.

ಅಧ್ಯಕ್ಷರು,—ತಾವೂ ಕಳಿಸಿದ್ದೀರಿ,ಮಾನ್ಯ ರಾಮ್‌ದೇವ್ ಅವರೂ ಕಳಿಸಿದ್ದಾರೆ. ಮಾನ್ಯ ಕೆಂಗೇಗೌಡರು ಕಳಿಸಿದ್ದಾರೆ ಮಾನ್ಯ ಮಂತ್ರಿಗಳು ಈ ದಿವಸ ಬೆಳಿಗ್ಗೆ ಫೋನ್ ಮಾಡಿ ರಾತ್ರಿ ವಿಷಯ ಗೊತ್ತಾದ ತಕ್ಷಣ ಮೈಸೂರಿಗೆ ಹೋಗುತ್ತಿದ್ದೇನೆ ನಾನೆ ಹೋಗಿ ಪರಿಶೀಲನೆಮಾಡಿಕೆ ಇಂದು ಬಂದು ಸಾಧ್ಯವಾದರೆ ಈ ದಿನ ಮಧ್ಯಾಹ್ನವೇ ಆದರ ಬಗ್ಗೆ ಹೇಳಿಕೆ ಮಾಡುತ್ತೇನೆ ಎಂದು ಈಗಾಗಲೇ ಹೇಳಿ ಹೋಗಿದ್ದಾರೆ. ಬಹುಳ ಮಟ್ಟಿಗೆ ಮೂರು,ಮೂರುವರೆ ಗಂಟೆ ಸಮಯಕ್ಕೆ ಬರಬಹುದು, ಬಂದನಂತರ ತೆಗೆದುಕೊಳ್ಳೋಣ,

ಶ್ರೀ ಎಚ್. ಗಂಗಾಧರನ್—ವಿಷಯ ಗೊತ್ತಾದ ಅರ್ಧ ಗಂಟೆಗೆ ನಾನು ಮಾನ್ಯ ಹಣಕಾಸಿನ ಸಚಿವರಿಗೆ ಫೋನ್ ಮಾಡಿದೆ, ತಕ್ಷಣ ಕಾರ್ಯಕ್ರಮ ಜರುಗಿಸುವ ವ್ಯವಸೆ ಮಾಡಿದರು. ಅವರು ಬಂದ ಮೇಲೆ ಹೇಳಿಕೆ ಕೊಡಿಸಿ.

ಶ್ರೀ ಪಿ. ರಾಮ್‌ದೇವ್.—ಇನ್ನೊಂದು ಬಹಳ ಮಹತ್ವರವಾದ ವಿಚಾರ, ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ. ಮಹಾರಾಷ್ಟ್ರ ಮುಖ್ಯ ಮಂತ್ರಿಯವರು ಪೊನ್ನೆ ಗಡಿ ವಿವಾದದ ಬಗ್ಗೆ ಮಾತುಕತೆ ನಡೆಸಿದ್ದೇವೆ, ತೃಪ್ತಿಕರವಾಗಿದೆ, ಶ್ರೀಮತಿ ಇಂದಿರಾಗಾಂಧಿಯವರ ಪ್ರವೇಶ ಬೇಕಾಗಿಲ್ಲ ಎಂದು ಹೇಳಿದ್ದಾರೆ. ಏನು ನಡೆದಿದೆ ಎನ್ನುವುದರ ಬಗ್ಗೆ ನಮ್ಮ ರಾಜ್ಯದ ಜನ ಕಾತುರರಾಗಿದ್ದಾರೆ. ಏನು ಮಾತುಕತೆ ಆಡಿದ್ದೀರಿ ಅದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಅಧ್ಯಕ್ಷರು.—ಇವತ್ತಿನ ಕಾರ್ಯಕ್ರಮಗಳು ಮುಗಿದ ಮೇಲೆ ನೋಡೋಣ.

ಶ್ರೀ ಟಿ. ಸೋಮಪ್ಪ.—ನಾನು ಒಂದು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೆ.—

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳೋಣ.

(*ii*) *Re : Talks with Central Leaders in regard tostrike by employees of Public Sector Industries*

(*iii*) *re : Agitation by Tobacco Growers of Nippani*

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಡೆಲ್ಲಿಯಿಂದ ಬಂದಿದ್ದಾರೆ. ಎರಡು ವಿಚಾರಗಳ ಬಗ್ಗೆ ಏನು ನಡೆಯಿತು ಎನ್ನುವುದನ್ನು ತಿಳಿಸಬೇಕು. ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್ ಬಗ್ಗೆ ನಾವೆಲ್ಲಾ ಮನವಿ ಮಾಡಿಕೊಂಡೆವು. ಕಾರ್ಮಿಕರು ಸಂಪುನಿಲ್ಲಿಸಿದರು. ಮಾನ್ಯ ಮುಖ್ಯ ಮಂತ್ರಿಗಳು ಮಾತುಕತೆ ನಡೆಸುವುದಾಗಿ ಸಂಪೂರ್ಣವಾಗಿ ಆಶ್ವಾಸನೆ ಕೊಟ್ಟರು. ನಾನು ಪತ್ರಿಕೆ ಓದಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟಂಥ ಮಂತ್ರಿಗಳ ಜೊತೆಯಲ್ಲಿ ಮತ್ತು ಪ್ರಧಾನಿಯವರ ಜೊತೆಯಲ್ಲಿ ಚರ್ಚೆಮಾಡಿದ್ದಾರೆ. ಇಡೀ ಬೆಂಗಳೂರು ನಗರದ ಕಾರ್ಮಿಕವರ್ಗ ಏನು ನಡೆದಿದೆ ಎಂದು ಕುತೂಹಲರಾಗಿದ್ದಾರೆ. ಈ ಮನೆಯ ಎಲ್ಲಾ ಸದಸ್ಯರು ನಾವೆಲ್ಲರೂ ಕೂಡ ಮುಖ್ಯ ಮಂತ್ರಿಗಳ ಮೇಲೆ ಹೆಚ್ಚಿನ ಜವಾಬ್ದಾರಿ ಹೊರಿಸಿದ್ದೇವೆ. ಬೆಳಿಗ್ಗೆಯಿಂದ ಕಾರ್ಮಿಕ ನಾಯಕರು ಫೋನ್ ಮಾಡಿ ಕೇಳುತ್ತಿದ್ದಾರೆ. ಮಾತುಕತೆ ಯಾವ ಮಟ್ಟಕ್ಕೆ ಬಂದಿದೆ ಎನ್ನುವುದರ ಬಗ್ಗೆ ಹೇಳಬೇಕು.

ಇನ್ನೊಂದು ವಿಚಾರ ಏನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋಗುವಾಗ ನಿಷ್ಪಾಣಿಯಿಂದ ರೈತರ ನಿಯೋಗ ಬಂದಿತ್ತು. ಅದರ ನಾಯಕರು, ನಾನು ಮತ್ತು ದೇವೇಗೌಡರು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇವೆ. ಆಗ ಮುಖ್ಯ ಮಂತ್ರಿಗಳು ಈ ವಿಚಾರವಾಗಿ ಕೇಂದ್ರ ಸರ್ಕಾರದಲ್ಲಿ ಚರ್ಚೆ ಮಾಡುತ್ತೇನೆ ಎಂದು ಆಶ್ವಾಸನೆಕೊಟ್ಟರು. ಇನ್ನೂ ರೈತರ ಚಳುವಳಿ ನಡೆಯುತ್ತಾ ಇದೆ. ೨೫ ಸಾವಿರ ರೈತರು ರಸ್ತೆ ಬಂದ್ ಚಳುವಳಿಯನ್ನು ನಿಷ್ಪಾಣಿಯಲ್ಲಿ ಮಾಡುತ್ತಾ ಇದ್ದಾರೆ. ಮತ್ತು ಕರ್ನಾಟಕದಲ್ಲಿ ತಂಬಾಕು ಬೆಳೆಯತಕ್ಕ ರೈತರು ಬಹಳ ಹಾನಿಗೆ ಒಳಗಾಗಿದ್ದಾರೆ. ಹೇಗೇ ಮೈಸೂರಿನಲ್ಲಿ ಟೊಬ್ಯಾಕೋವನ್ನು ಮಾರಾಟಕ್ಕೆ ತೆಗೆದುಕೊಳ್ಳುವಪರೇ ಇಲ್ಲ. ಕೇಂದ್ರ ಸರ್ಕಾರಕ್ಕೂ ೪೦ ರಿಂದ ೫೦ ಕೋಟಿ ರೂಪಾಯಿವರೆಗೆ ಪರಮಾನ ಬರತಕ್ಕ ಬೆಳೆಯನ್ನು ಬೆಳೆಯುತ್ತಿದ್ದಾರೆ. ಇಂತಹ ಬೆಳೆಯನ್ನು ಬೆಳೆಯತಕ್ಕ ರೈತರು ಮುಳುಗಿ ಹೋಗುತ್ತಾ ಇದ್ದಾರೆ. ಯೋಗ್ಯ ಬೆಲೆ ಸಿಗಬೇಕು ಎಂದು ಚಳುವಳಿ ಮಾಡುತ್ತಾ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದರು. ಈ ಎರಡು ವಿಚಾರಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ತಿಳಿಸಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಗುಂಡೂರಾವ್ —ನಾನು ಡೆಲ್ಲಿಗೆ ಹೋಗುವುದಕ್ಕೆ ಮೊದಲು ಎಲ್ಲಾ ವಿರೋಧಪಕ್ಷಗಳ ನಾಯಕರುಗಳನ್ನು ಕರೆಸಿ ಬೇಟಿಮಾಡಿ, ಅವರ ಜೊತೆಯಲ್ಲಿ ಚರ್ಚೆಮಾಡಿ ಹೋಗಿ ಡೆಲ್ಲಿಯಲ್ಲಿ ಮಾತುಕತೆ ನಡೆಸಿ ಬಂದಿದ್ದೇನೆ, ಪುನಃ ನಿಮ್ಮನ್ನೆಲ್ಲಾ ಕರೆದು ಏನು ಚರ್ಚೆ ನಡೆಯಿತು ಎಂದು ತಿಳಿಸುತ್ತೇನೆ. ಈ ರೀತಿ ತಿಳಿಸುವುದು ಒಳ್ಳೆಯ ಸಂಪ್ರದಾಯ, ತಮ್ಮನ್ನು ಭೇಟಿಮಾಡಿ ಇವತ್ತು ಅಥವಾ ನಾಳೆ